ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ

# ಅವಿಶ್ವಾಸ ನಿರ್ಣಯ ತಂದರೆ ಕ್ಷಣವೂ ಪೀಠದಲ್ಲಿ ಕೂರಲ್ಲ

**ಬೆಂಗಳೂರು:** ಮೇಲ್ಮನೆಯಲ್ಲಿ ನನ್ನ ವಿರುದ್ಧ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಅವಿಶ್ವಾಸ ನಿರ್ಣಯ ತಂದಲ್ಲಿ ಒಂದು ಕ್ಷಣವೂ ಸಭಾಪತಿ ಪೀಠದಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇಲ್ಮನೆಯ ಸದ್ಯದ ಸಂಖ್ಯಾಬಲದಲ್ಲಿ ಕಾಂಗ್ರೆಸ್ ಅವಿಶ್ವಾಸ ನಿರ್ಣಯ ತರುವುದು ಸಾಧ್ಯವಿಲ್ಲ. ಕೆಲವು ಸದಸ್ಯರ ರಾಜೀನಾಮೆ ಹೊರತಾಗಿಯೂ ಬಿಜೆಪಿಗೆ ಬಹುಮತವಿದೆ. ನಾನು ಯಾವತ್ತೂ ಯಾವುದೇ ಸ್ಥಾನಕ್ಕೆ ಅಂಟಿಕೊಂಡು ಕುಳಿತವನಲ್ಲ ಎಂದು ಸ್ಪಷ್ಟಪಡಿಸಿದರು.

ಸಿಎಂ ಸಿದ್ದರಾಮಯ್ಯ ಹಾಗೂ ನಾನು ದಶಕಗಳ ಕಾಲದ ಸ್ನೇಹಿತರು. ರಾಜಕಾರಣವೇ ಬೇರೆ, ವೈಯಕ್ತಿಕ ಸ್ನೇಹವೇ ಬೇರೆ. ಅವರೊಂದಿಗೆ ಔಪಚಾರಿಕ ಮಾತುಕತೆ ನಡೆದಿದೆ ಅಷ್ಟೇ ಎಂದೂ ಹೊರಟ್ಟಿ ಅವರು ಹೇಳಿದರು.

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA
# ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ



ಮುಖ್ಯಮಂತ್ರಿ ಆದ ಬಳಿಕ ಮೊದಲ ಬಾರಿಗೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಆತ್ಮೀಯವಾಗಿ ಸನ್ಮಾನಿಸಿ, 'ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು' ಎಂಬ ಪುಸ್ತಕ ನೀಡಿದರು.